ಅ) ಈ ಪೈಪುಗಳು ಆಗಿಂದ್ದಾಗ್ಗೆ ಒಡೆದು ನೀರು ಪೋಲಾಗುತ್ತಿರುವ ವಿಚಾರವು ನಿಜವಲ್ಲವೆ?

ಇ) ಹಾಗಿದ್ದಲ್ಲಿ ಮೇಲ್ಕಂಡ ಬಡಾವಣೆಗಳ ಪೈಕಿ ಬನಶಂಕರಿಯ ೩ನೇ ಸ್ಟೇಜ್ ಕತ್ತರಿಗುಪ್ಪೆಯಲ್ಲಿ ಅಳವಡಿಸಲಾಗಿರುವ ಸದರಿ ಪೈಪುಗಳು ಒಡೆಯುತ್ತಿರುವುದರ ಬಗ್ಗೆ ದೂರುಗಳಿರುವುದರಿಂದ ಈ ಪೈಪುಗಳಿಗೆ ಬದಲಾಗಿ ಕಬ್ಬಿಣದ ಪೈಪುಗಳನ್ನು ಅಳವಡಿಸಲಾಗುವುದೇ?

ಈ) ಈ ಕಾರ್ಯವನ್ನು ಎಷ್ಟು ದಿನಗಳೊಳಗಾಗಿ ಕೈಗೊಳ್ಳಲಾಗುವುದು ?

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು).—

ಅ) ಬೆಂಗಳೂರು ಜಲ ಮಂಡಳಿಯು ಪಿ.ವಿ.ಸಿ. ಪೈಪುಗಳ ಮುಖೇನ ಕುಡಿಯುವ ನೀರನ್ನು ಸರಬರಾಜು ಮಾಡುತ್ತಿರುವ ಬಡಾವಣೆಗಳ ಸಂಖ್ಯೆ ಸುಮಾರು ಎಂಟು. ಅವುಗಳೆಂದರೆ ಸಾರಕ್ಕಿ, ಕುಮಾರಸ್ವಾಮಿ ಬಡಾವಣೆ, ಸಂಜಯನಗರ, ಆರ್. ಟಿ. ನಗರ, ಹಾಗೂ ಭಾಗಶಃ ಬನಶಂಕರಿಯ ಮೊದಲನೇ ಮತ್ತು ಎರಡನೇ ಹಂತ, ಹೆಚ್.ಎಂ.ಟಿ. ಲೇಔಟ್ (ಗಂಗೇನಹಳ್ಳಿ) ಮತ್ತು ಬಾಪೂಜಿ ಲೇಔಟ್ (ವಿಜಯನಗರ)

ಆ) ಭಾಗಶಃ ನಿಜ, ಆದರೂ ಆದಷ್ಟು ಬೇಗ ನೀರು ಸೋರುವಿಕೆಯನ್ನು ನಿಲ್ಲಿಸಲಾಗುತ್ತಿದೆ.

ಇ) ಪೈಪುಗಳು ಒಡೆಯುತ್ತಿಲ್ಲ. ಹಾಗೂ ಹೇಳಿಕೊಳ್ಳುವಂತಹ ನೀರು ಸೋರುವಿಕೆಯೂ ಇರುವುದಿಲ್ಲ. ಆದ್ದರಿಂದ ಪೈಪುಗಳನ್ನು ಬದಲಾಯಿಸಿ ಮಾಡುವ ಅಗತ್ಯವಿಲ್ಲ.

ಈ) ಅನ್ವಯಿಸುವುದಿಲ್ಲ.

ಬೆಳಗಾವಿ ನಗರ ಪಾಲಿಕೆಯ ಮೇಲೆ ರಾಷ್ಟ್ರಧ್ವಜ ಕೂಡ ಇದ್ದ ಭಗವಾ ಧ್ವಜ ತೆಗೆಯಿಸುವ ಬಗ್ಗೆ

ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಬೆಳಗಾವಿ ನಗರಪಾಲಿಕೆಯ ಕಟ್ಟಡದ ಮೇಲೆ ರಾಷ್ಟ್ರಧ್ವಜದ ಜೊತೆಗೆ ಭಗವಾ ಧ್ವಜವನ್ನು ಹಾರಿಸುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಸರಕಾರಿ ಕಟ್ಟಡ ಹಾಗೂ ನಗರಪಾಲಿಕೆಯ ಮೇಲೆ ರಾಷ್ಟ್ರಧ್ವಜದ ಜೊತೆ ಬೇರೆ ಪಕ್ಷಗಳ ಧ್ವಜ ಹಾಗೂ ಭಗವಾ ಧ್ವಜವನ್ನು ಹಾರಿಸುವುದು ನಿಯಮಬಾಹಿರವಲ್ಲವೆ?

ಇ) ಹಾಗಿದ್ದಲ್ಲಿ, ಆ ಭಗವಾ ಧ್ವಜವನ್ನು ತೆಗೆಯಿಸಲು ಸರ್ಕಾರದವರು ಯಾವ ಕ್ರಮ ಕೈಗೊಂಡಿರುವರು ?

ಈ) ಈ ಬಗ್ಗೆ ಹಿಂದಿನ ಅಧಿವೇಶನದಲ್ಲಿ ಭಗವಾ ಧ್ವಜವನ್ನು ತೆಗೆಯಲು ಮುನಿಸಿಪಲ್ ಕಾಯಿದೆಗೆ ಮುಂದಿನ ಅಧಿವೇಶನದೊಳಗೆ ತಿದ್ದುಪಡಿ ತರಲಾಗುವುದೆಂದು ಆಶ್ವಾಸನೆ ಕೊಟ್ಟಿದ್ದು ಈಗ ಅದು ಯಾವ ಹಂತದಲ್ಲಿದೆ ?

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಬಂದಿದೆ

ಆ) ಭಾರತದ ಧ್ವಜನಿಯಮದ ಮೇರೆಗೆ ರಾಷ್ಟ್ರೀಯ ಧ್ವಜಕ್ಕಿಂತ ಮೇಲುಗಡೆ ಅಥವಾ ಎತ್ತರಕ್ಕೆ ಬೇರೆ ಯಾವುದೇ ಧ್ವಜವನ್ನು ಹಾರಿಸುವುದು ಹಾಗೂ ವಿಶ್ವ ಸಂಸ್ಥೆಯ ಧ್ವಜ ಅಥವಾ ಬೇರೆ ದೇಶಗಳ ಧ್ವಜಗಳನ್ನು ಹೊರತುಪಡಿಸಿ ಬೇರೆ ಯಾವುದೇ ಧ್ವಜವನ್ನು ರಾಷ್ಟ್ರೀಯ ಧ್ವಜದ ಪಕ್ಕದಲ್ಲಿ ಹಾರಿಸಕೂಡದು ಎಂಬ ನಿಯಮವಿದೆ. ಆದರೆ ಧ್ವಜನಿಯಮವು ಭಾರತ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಕಾಯ್ದೆ ಆಗಿರುವುದಿಲ್ಲ.

ಇ) ಈ ಪ್ರಸ್ತಾವನೆ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಈ) ಪರಿಶೀಲನೆಯ ಹಂತದಲ್ಲಿದೆ.